'ನಾಳೆಯಿಂದ ಮೂರು ದಿನಗಳ ಕಾಲ ಪರೀಕ್ಷೆಗಳು ನಡೆಯಲಿವೆ, ಅದಕ್ಕೆ ದಕ್ಷ ಅಧಿಕಾರಿ ಎನ್ನಿಸಿರುವ ನಿಮ್ಮನ್ನು ಮೇಲ್ವಿಚಾರಣೆ ಅಧಿಕಾರಿಯನ್ನಾಗಿ ನೇಮಿಸಿದ್ದಾರೆ. ನೀವಿರುವ ಕಡೆ ಯಾವುದೇ ರೀತಿಯ ದುಷ್ಕೃತ್ಯಗಳಿಗೆ ಅವಕಾಶವಿಲ್ಲ, ಆದರೂ, ಆಗಬಹುದಾದ ನಕಲನ್ನು ಕಂಡುಹಿಡಿದು ಪ್ರಾಮಾಣಿಕ ಅಭ್ಯರ್ಥಿಗಳಿಗೆ ನ್ಯಾಯ ದೊರಕಿಸಿ. ಇದು ನಿಮಗೆ ನನ್ನ ಪ್ರಾರ್ಥನೆ.'

ರಾತ್ರಿ ಸುಮಾರು ಹತ್ತು ಗಂಟೆಗೆ ಈ ಸಂದೇಶ ಬಂದಿತ್ತು. ಕಳುಹಿಸಿದ್ದ ವ್ಯಕ್ತಿ ತನ್ನ ಗುರುತು – ಪರಿಚಯ ಹೇಳಿಕೊಂಡಿಲ್ಲ.

ಇದಕ್ಕೆ ವಿಶೇಷ ಅರ್ಥ ಕೊಡಬೇಕೇ? ಈ ಅವೇಳೆಯಲ್ಲಿ ಇಂತಹ ಸಂದೇಶವೆಂದರೆ? ನಾನಿರುವ ಕಡೆ ತಪ್ಪು ನಡೆಯಲು ಸಾಧ್ಯವೇ ಇಲ್ಲ. ನಾನು ನನ್ನ ಕೆಲಸದಲ್ಲಿ ಎಷ್ಟು ಕಠಿಣ ಎಂಬುದು ನನ್ನ ಇಲಾಖೆಯಲ್ಲಿ ಎಲ್ಲರಿಗೂ ತಿಳಿದ ವಿಷಯವೇ.

ನಾಳೆ ನಡೆಯಲಿರುವುದು ಇಲಾಖೆಯ ಆಂತರಿಕ ಪರೀಕ್ಷೆ. ಇರುವುದು ಕೇವಲ ಐದು ಹುದ್ದೆಗಳು. ಪರೀಕ್ಷೆಯಲ್ಲಿ ಒಟ್ಟು ನಾಲ್ಕುಪತ್ರಿಕೆ, ನಾಲ್ಕುದಿನಗಳಲ್ಲಿ ನಡೆಯುವಂತದ್ದು. ಬೆಳಗ್ಗೆ ಹತ್ತರಿಂದ ಮಧ್ಯಾಹ್ನ ಒಂದರವರೆಗೆ. ಅಂದರೆ, ಮೂರು ಇಂಟು ನಾಲ್ಕು... ಹನ್ನೆರಡು ಗಂಟೆಗಳ ಅವಕಾಶದಲ್ಲಿ ಅಭ್ಯರ್ಥಿಗಳ ಸಾಮರ್ಥ್ಯ ತಿಳಿಯಲಿದೆ. ಹೆಚ್ಚಿನ ಅಂಕ ಗಳಿಸುವ ಐವರಿಗೆ ಪ್ರಮೋಷನ್ ಭಾಗ್ಯ, ಹಸಿರು ಶಾಯಿ ಬಳಸುವ ಅಧಿಕಾರ, ದೃಢೀಕರಿಸುವ ಹುದ್ದೆ, ಪ್ರತ್ಯೇಕ ಕೋಣೆ, ಜವಾನ, ವಿಸಿಟರ್ಸ್ ಚೇರ್, ಹತ್ತು ಹಲವು ಸವಲತ್ತುಗಳು. ತಮ್ಮ ಕೆಲಸಕ್ಕಾಗಿ ದೇಹಿ ಎಂದು ಇವರ ಮುಂದೆ ಕೈಕಟ್ಟಿ ನಿಲ್ಲುವ ಜನ, ಕರೆ ಹೋದ ಕೂಡಲೇ 'ಎಸ್ ಸರ್' ಅಥವಾ 'ಎಸ್ ಮೇಡಂ' ಎಂದು ಹಾಜರಾಗುವ ಅಧೀನ ನೌಕರರು... ಒಂದೇ ಎರಡೇ!

ಅದೃಷ್ಟ ಯಾರಿಗಿದೆಯೋ? ಈ ಸಂದೇಶ ಯಾರು ಕಳುಹಿಸಿರಬಹುದು ?

ಅಭ್ಯರ್ಥಿಗಳಲ್ಲಿ ಒಬ್ಬರಿರಬಹುದೇ... ಹೀಗಾಗಿಯೇ 'ಪ್ರಾಮಾಣಿಕ ಅಭ್ಯರ್ಥಿಗಳಿಗೆ ನ್ಯಾಯ ದೊರಕಿಸಿ' ಎಂದು ಮನವಿ ಮಾಡಿರಬಹುದೇ? ಆ ವ್ಯಕ್ತಿ ಈಗಾಗಲೇ ಪರೀಕ್ಷೆ ಬರೆದು ಜಯ ಕಾಣದಿರಬಹುದು, ಇಲ್ಲ ಜಯದ ಅಂಚಿನವರೆಗೂ ಹೋಗಿ ಹಿಂತಿರುಗಿರಬಹುದು ಅಥವಾ ತಮ್ಮ ಸ್ನೇಹಿತರ ಪರವಾಗಿ ಬಿನ್ನವಿಸಿಕೊಂಡಿರಬಹುದು... ಅಥವಾ ದುರಾಚಾರಗಳು ನಡೆಯದಿರಲಿ ಎಂಬ ಕಳಕಳಿ ಮಾತ್ರವೇ ಇರಬಹುದೇ? ಸಂದೇಶ ಕಳುಹಿಸಿರುವ ಸಂಖ್ಯೆಯನ್ನು ಹಿಂಬಾಲಿಸಲೇ? ಅದೇನೂ ಕಷ್ಟವಲ್ಲ, ಚಿಟಿಕೆ ಹೊಡೆಯುವಷ್ಟರಲ್ಲಿ ಕಂಡುಹಿಡಿಯಬಹುದು.

ನಿಜವಾಗಿಯೂ ನಾಳೆಯಿಂದ ಮೊದಲಾಗುವ ಪರೀಕ್ಷೆಯಲ್ಲಿ ಯಾವುದಾದರೂ ಅನಪೇಕ್ಷಿತ ವ್ಯವಹಾರ ನಡೆಯುವುದೇ? ನನ್ನ ಮೇಲಿನ ನಂಬಿಕೆಯಿಂದ ಈ ರೀತಿಯ ಸಂದೇಶದ ಮೂಲಕ ನನ್ನನ್ನು ಎಚ್ಚರಿಸಿದ್ದಾರೆ! ಹೇಗಾದರೂ ಇರಲಿ, ನಾನು ಇನ್ನೂ ಹೆಚ್ಚು ಜಾಗ್ರತೆಯಿಂದ ನನ್ನ ಕೆಲಸವನ್ನು ನಿಭಾಯಿಸಬೇಕು.

ಅಷ್ಟರಲ್ಲಿ ಇನ್ನೊಂದು ಸಂದೇಶದ ಸದ್ದು.

ತೆರೆದು ನೋಡಿದೆ – ಮತ್ತದೇ ಅನಾಮಿಕನಿಂದ...

'ಸಂದೇಶ ಕಳುಹಿದವರ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಳ್ಳಬೇಡಿ, ನೀವು ನಿಮ್ಮ ಕೆಲಸದಲ್ಲಿ ವಿಜಯಶಾಲಿಯಾದರೆ ನಾನೇ ನಿಮ್ಮನ್ನು ಖುದ್ದು ಕಂಡು ಅಭಿನಂದಿಸುತ್ತೇನೆ. ಸಮಯ ಬಹಳ ಕಡಿಮೆ ಇರುವುದರಿಂದ ನಿಮಗೆ ಒಂದು ಪದದ ಸುಳುಹು ಕೊಡುತ್ತಿದ್ದೇನೆ – 'ತ್ರಿಕರ'. ಇದರ ಸಹಾಯದಿಂದ ನೀವು ಖಂಡಿತ ಭೇದಿಸುತ್ತೀರಿ ಎಂದು ನನ್ನ ನಂಬಿಕೆ.'